# ಒಗ್ಗಟ್ಟಿನ ಬಲ!




ಚಿತ್ರ: ವಿಜಯಕುಮಾರಿ ಆರ್.

ಒಮ್ಮೆ ಮಾರ್ಕೆಟ್ ನಲ್ಲಿ ಒಬ್ಬ ದ್ರಾಕ್ಷಿ ಮಾರುವವನ ಹತ್ತಿರ ಒಂದು ಕೆಜಿ ದ್ರಾಕ್ಷಿಗೆ ಎಷ್ಟಪ್ಪಾ ಎಂದು ಕೇಳಿದಾಗ, ಅವನು 80 ರೂಪಾಯಿ ಎಂದನು.
ಆ ಗಾಡಿಯಲ್ಲೇ ದ್ರಾಕ್ಷಿ ಗೊಂಚಲಿನ ಪಕ್ಕದಲ್ಲೇ ಬಿಡಿ ಬಿಡಿಯಾಗಿ ದ್ರಾಕ್ಷಿಗಳು ಬಿದ್ದಿದ್ದವು. ಬಿಡಿ ದ್ರಾಕ್ಷಿ ಎಷ್ಟು ಎಂದು ಕೇಳಿದಾಗ, ಅವನು ಅದು 30 ರೂಪಾಯಿ ಕೆಜಿಗೆ ಎಂದನು. ನಾನು ಯಾಕಪ್ಪಾ, ಅದು ಚೆನ್ನಾಗಿಲ್ಲವೆ? ಎಂದಾಗ, ಇಲ್ಲಮ್ಮ ಅದು ಚೆನ್ನಾಗಿಯೇ ಇದೆ. ಆದರೆ, ಅದು ಗೊಂಚಲಿಂದ ಬಿದ್ದಿರುವುದಕ್ಕೆ ಅದು ಬೆಲೆ ಕಳೆದುಕೊಂಡಿದೆ ಎಂದನು.

ಹಾಗೆಯೇ ಮಕ್ಕಳೇ , ನಾವು ಸದಾ ಒಗ್ಗಟ್ಟಿನಿಂದ ಒಟ್ಟಾಗಿದ್ದರೆ ನಮಗೆ ಬಲವು ಇರುವುದು, ಬೆಲೆಯು ಇರುವುದು ಮತ್ತು ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವುದು.
ಒಂದು ವೇಳೆ ನಾವು ಗುಂಪಿನಿಂದ ಕೋಪಿಸಿಕೊಂಡೊ, ಜಗಳವಾಡಿಕೊಂಡೊ ಹೊರಬಂದರೆ, ಯಾವ ಕೆಲಸವು ಅಂದುಕೊಂಡಂತೆ ನಡೆಯದೆ, ಒಬ್ಬಂಟಿಯಾಗಿ ಅದರಿಂದ ಬಾಧೆ ಪಡುವುದು ನಾವೇ ಅಲ್ಲವೇ..!

■ ಸಿ.ಆರ್. ಪುಷ್ಪ

# ಬೇಸಿಗೆ ಬೇಡಪ್ಪ!

ಧಗಧಗ ಧಗಧಗ
ಉರಿ ಉರಿ ಬಿಸಿಲು
ಅಯ್ಯೋ ಬೇಸಿಗೆ ಬೇಡಪ್ಪ!
ದಳದಳ ದಳದಳ
ಬೆವರು ಬಸಿಯಲು
ಅಯ್ಯೋ ವಾಸನೆ ಸಾಕಪ್ಪ!

ಸುರುಸುರು ಸುರುಸುರು
ಸಂಕಟ ಸುರಿಯಲು
ನೆಮ್ಮದಿ ಮನಕೆ ಇಲ್ಲಪ್ಪ!
ಬಡಬಡ ಬಡಬಡ
ಕೆಲಸ ಮಾಡಲು
ಸುಸ್ತು ಬರುವುದು ಯಾಕಪ್ಪ!

ಜುಳುಜುಳು ಜುಳುಜುಳು
ಹರಿಯುವ ಹಳ್ಳ
ಕೊಳ್ಳ ಬತ್ತಲು ಹ್ಯಾಗಪ್ಪ!

ನೀರಿನಕೊರತೆ
ಎಲ್ಲಡೆ ಆಗಲು
ನಾಡೇ ನಲುಗಿದೆ ನೋಡಪ್ಪ!

ರಣಗುಡು ಬಿಸಿಲು
ಭಣಗುಡು ಭೂಮಿ
ಕರುಣೆಯನ್ನು ತೋರಪ್ಪ!
ಏನಿದು ಬೇಸಿಗೆ
ಬೇಸರ ಮನಸಿಗೆ
ಸಾಕು ಮಾಡೋ ನನ್ನಪ್ಪ!

ರಪರಪ ರಪರಪ
ಮಳೆಯನು ಸುರಿಸಿ
ಮನಸಿಗೆ ನೆಮ್ಮದಿ ನೀಡಪ್ಪ!
ಹಸುರಿನ ಹಾಸಿಗೆ
ಎಲ್ಲಡೆ ಹಾಸಿ
ಹೊಸತನ ತೋರೊ ನನ್ನಪ್ಪ!

■ ಕರವೀರಪ್ರಭು ಕ್ಯಾಲಕೊಂಡ

